'ಅವ್ರು ಬರ್ಲಿ... ನನ್ನ ಮನಿ ಮುಂದ್ಕೆ ವೋಗ್ಬೇಕಲ್ಲ. ಬಿಡ್ತೀನ ನಾನು... ಅಡ್ಡ ಆಕ್ತೀನಿ. ನನ್ನ ಮನಿ ತೋರ್ಸಿ ನಿಮ್ಮ ಜಾತ್ಕಾನೆಲ್ಲ ರೋಡಿಗೆಸೀತೀನಿ. ಅಲ್ಲಾಲೆ... ಆ ಸ್ಕೂಲ್ನಾಕೆ ಇರೋದೆ ಐದಾರು ಮಕ್ಳು. ಕಲರ್ ಕಲರ್ ಕಾಣೋಂಗೆ ಮಾಡ್ಬಿಟ್ಟು ಫೋಟೊ ವಿಡಿಯೊ ಕಳಿಸ್ಬಿಟ್ರೆ ಅವಾರ್ಡು ಕೊಡ್ತಾರ. ನಾ ಅಂಗನವಾಡೀಕೆ ಎಂತೊಟ್ಟು ಪಿಲಕ್ಕಾಯಿಗಳಿಗೆ ಕಲಿಸಿವ್ನಿ... ಅಂಗನವಾಡೀಕೆ ಯಾಕ್ಲ ಇದುವರ್ಗು ಒಂದೂ ಅವಾರ್ಡು ಸಿಕ್ಕಿಲ್ಲ. ಎಲ್ಲಾ ಮೇಲಿನವ್ರುಗ್ಳೇನಾ?'

ಅವಳೊಳಗಿನ ಕಿಚ್ಚು ಧಗಧಗಿಸುತ್ತಲೆ ಇತ್ತು. ಮಳೆ ಸರುವು ಬಿಟ್ಟಿತ್ತು. ಆ ಮಳೆಗೆ ತೆರೆದುಕೊಂಡಿದ್ದ ಅವಳು ಮೇಲಿನಿಂದ ಕೆಳಗೆ ಹರಿಯುತ್ತಿರುವಂತೆ ಕಾಣತೊಡಗಿದಳು. ಅಷ್ಟರಲ್ಲಿ ಎದುರು ಮನೆಯ ಕೋಮಲ, 'ಅಕ್ಕೋ ಶಾರದಕ್ಕ... ಮಳೆನಾಕ ಆ ಪಾಟಿ ನೆನಕಂಡು ನಿಂತ್ಯಲ್ಲ ಮನೆ ಒಳುಕಾರು ವೋಗ್ಬಾರ್ದೆ' ಎಂದು ಕೂಗಿದಳು. ಅದಕ್ಕೆ ಶಾರದಮ್ಮ 'ಮನಿ ಒಳುಕೂ ಅದೇ ಕತೆ. ಅಲ್ಲೂ ಮಳೇನೆ ಇಲ್ಲೂ ಮಳೇನೆ. ಎಲ್ಲಾ ಒಂದೇ ಬಿಡು. ನಿಮುಕೆಲ್ಲ ಆಕಾಶ್ದಾಕೆ ಮೋಡುಗ್ಳು ಇದ್ರೆ... ನಂಕೆ ಮಿದ್ದಿ ಮೇಕೆ–ಕೆಳುಕೆ ಎಲ್ಲಾ ಮೋಡುಗ್ಳೆ' ಎಂದು ವ್ಯಂಗ್ಯ ತುಂಬಿದ ಧಾಟಿಯಲ್ಲಿ ನುಡಿದಳು. ಕೋಮಲ ಮತ್ತೆ 'ಅಕ್ಕೋ ಟೌನುಕೋಗಿ ಪ್ಲಾಸ್ಟಿಕ್ ಕವರ್ರಾದ್ರು ತಕಂಬಂದು ಆಕ್ಕೋದಿತ್ತಲ್ಲ. ನೀ ವೋಗಕ್ಕಾಗಿಲ್ಲಾಂದ್ರೆ ನಾಗರಾಜನ್ನಾದ್ರು ಯೇಳ್ಬೋದಿತ್ತಲ್ಲ... ವೋಗ್ಲಿ ನಮ್ಮನಿ ಒಳುಕಾರ ಬಾ' ಕಾಳಜಿ ವ್ಯಕ್ತಪಡಿಸುತ್ತಾ ನುಡಿದಳು. ಕೋಮಲಳ ಗಂಡ ಮನೆಯಲ್ಲಿರುತ್ತಿದ್ದರೆ ಅವಳು ಒಂದು ಮಾತನ್ನೂ ಶಾರದಮ್ಮನ ಜೊತೆ ಆಡುತ್ತಿರಲಿಲ್ಲ. ಅದು ಶಾರದಮ್ಮನಿಗೆ ತಿಳಿದ ವಿಷಯವೇ ಆಗಿತ್ತು. ಮಗಳು ಪಾರ್ವತಿ ಜೈಲಿಗೆ ಹೋದಾಗಿನಿಂದ ಮುಕ್ಕಾಲು ಊರು ಅವಳೊಡನೆ ಹೆಚ್ಚುಕಮ್ಮಿ ಮಾತು ಬಿಟ್ಟಿತ್ತು. ಮಗಳನ್ನು ಗಂಡುಬೀರಿಯಂತೆ ಬೆಳೆಸಿಬಿಟ್ಟಳು, ಅವಳ ಚಾಳಿಯನ್ನು ಮಗಳಿಗೂ ಕಲಿಸಿಬಿಟ್ಟಳು ಎಂಬ ಆರೋಪ ಶಾರದಮ್ಮನ ಮೇಲೆ ಮೊದಲಿನಿಂದಲೂ ಇತ್ತು. ಪಾರ್ವತಿಯನ್ನು ಪಕ್ಕದೂರಿಗೆ ಕೊಟ್ಟಿದ್ದು. ಅವನ ಕುಡಿತದ ಚಟ ಗೊತ್ತಾದದ್ದೇ ಮದುವೆಯ ನಂತರ. ಮೊದಮೊದಲು ವಾರಕ್ಕೆ ಒಮ್ಮೆ, ನಂತರ ಎರಡು ಬಾರಿ, ಕ್ರಮೇಣ ದಿನವೂ ಕುಡಿದುಕೊಂಡು ಬಂದು ಗಲಾಟೆಮಾಡುತ್ತಲಿದ್ದ. ಒಂದು ದಿನ ಗಲಾಟೆ ಹೊಡೆದಾಟದ ಮಟ್ಟಕ್ಕೆ ಬೆಳೆದು ಪಾರ್ವತಿ ಕೈಗೆ ಸಿಕ್ಕ ಪಾತ್ರೆಯಿಂದ ಅವನ ತಲೆಗೆ ಬಡಿದಿದ್ದಳು. ಅಷ್ಟೆ, ಅವನು ತೆಪ್ಪಗೆ ಬಿದ್ದುಬಿಟ್ಟ. ಮತ್ತೆ ಏಳಲೇ ಇಲ್ಲ. ಆ ನಂತರ ಪಾರ್ವತಿ ಜೈಲು ಸೇರಿದಳು. ಶಾರದಮ್ಮನ ಬಳಿ ಇದ್ದ ಒಂದಷ್ಟು ಗಂಟು ಕೋರ್ಟು ಕೇಸು ಓಡಾಟದಲ್ಲಿ ಕರಗಿಹೋಗಿತ್ತು. ಜೊತೆಗೆ ಒಂದಷ್ಟು ಸಾಲವನ್ನೂ ಮಾಡಿಕೊಂಡಿದ್ದಳು. ಇದೆಲ್ಲದರ ಜೊತೆಗೆ ಇಷ್ಟೆಲ್ಲಕ್ಕೂ ತಾನೆ ಕಾರಣ ಎಂಬ ಊರವರ ಅಪವಾದ. ಅವಳಿಗೆ ರೋಸಿಹೋಗಿತ್ತು. ಮಾತನಾಡುವುದನ್ನು ಕಮ್ಮಿ ಮಾಡಿ ತಾನಾಯಿತು ತನ್ನ ಕೆಲಸವಾಯಿತು ಎಂಬಂತೆ ಇರುವುದನ್ನು ರೂಢಿ ಮಾಡಿಕೊಂಡಿದ್ದಳು.

ಕೋಮಲ ನಾಗರಾಜನ ಹೆಸರನ್ನು ಹೇಳುತಿದ್ದಂತೆ 'ಅವುನು ರಾಗಿ ಮಿಲ್ಲುಕೆ ವೋಗ್ಬೇಕಾದ್ರೆ ನಂದೂ ಸ್ವಲ್ಪ ಇದೆ ತಕೊಂಡೋಗೊ ಅಂದ್ರೇನೆ ರಗುಲ್ತಾನೆ. ಇನ್ನ ಇದ್ನ ಮಾಡ್ತಾನ' ಎಂದು ನುಡಿದಳು. ಅಷ್ಟರಲ್ಲಿ ನಾಗರಾಜ ಒಂದು ಪ್ಲಾಸ್ಟಿಕ್ ಗೊಂಗಡಿಯನ್ನು ಇಳಿಬಿಟ್ಟುಕೊಂಡು ಮೊಬೈಲಿನಲ್ಲಿ 'ನಮ್ಮೂರ್ಕೆ ಇಂಡಿಯಾ ಪ್ರೆಸಿಡೆಂಟ್ ಬರ್ತಿದಾರೆ... ನಮ್ಮೂರ್ನ ಸ್ಕೂಲಿಕೆ ನ್ಯಾಷನಲ್ ಅವಾರ್ಡ್ ಬಂದಿದೆ' ಎಂದು ಮಾತನಾಡುತ್ತಾ ಶಾರದಮ್ಮಳ ತುಸು ಪಕ್ಕಕ್ಕೆ ನಿಂತು, 'ಕೆಂಪಿರೆಡ್ಡಿಯ ಜೊತೆ ತಿಕ್ಕಲು ತಿಕ್ಕಲಾಗಿ ಪಲುಕ್ತಿದ್ದಂತೆ. ಪ್ರೆಸಿಡೆಂಟ್ ಬರೋ ಟೇಮುಕೆ ಏನಾರ ತಿಕ್ಕಲು ವೇಷ ಆಕಿದ್ರೆ ಕಾಲು ಮುರಿದಾಕ್ತೀನಿ. ನಮ್ಮೂರ್ನ ಮಾನ ತೆಗಿಯಾಕೆ ವುಟ್ಟಿದೀಯ. ಮುಚ್ಕಂಡು ಒಳಕೋಗಿ ತೆಪ್ಪಕೆ ಕೂತ್ಕ' ಎಂದು ಗದರಿಸುವಂತೆ ನುಡಿದ. ಶಾರದಮ್ಮ ನಾಗರಾಜನ ಕಡೆಗೇ ನೋಡತೊಡಗಿದಳು. ಚಿಕ್ಕಮ್ಮನ ಜೊತೆ ಮಾತನಾಡುವ ರೀತೀನಾ ಇದು ಎಂದುಕೊಂಡಳು. ಕೆನ್ನೆಗೆ ಒಂದು ಬಾರಿಸಬೇಕು ಅನಿಸತೊಡಗಿತು. 'ನನ್ನ ನರುಕಿದ್ರು ನಿಮ್ಮ ರಾಷ್ಟ್ರಪತಿಗಳ ಕಾರ್ನ ನನ್ನ ಮನಿ ಮುಂದೆ ಅಡ್ಡ ಆಕ್ತೀನಿ. ಸುಮ್ಕೆ ಬಿಡೋಳಲ್ಲ ನಾನು' ಎಂದು ನುಡಿದ ಅವಳು ತನ್ನ ಮನೆಯ ಒಳಗೆ ನಡೆದಳು. ಮನೆಯ ಒಳಗೆ ನೀರು ಸಂಭ್ರಮಿಸುತ್ತಲಿತ್ತು. ಗೋಡೆಯ ಪದರು ಉದುರಿ ಆ ನೀರೊಳಗೆ ಬಿದ್ದು ಹಲವು ಕಡೆ ರಾಡಿಯೂ